**ದಿನಾಂಕಃ 22.01.2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣೀಕರಿಸಲಾಯ್ತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ-**

14. ಓ ಎಸ್ 361/2017 ದಾವೆಯನ್ನು ನಾವು ಸಲ್ಲಿಸಿದ್ದ ಸಮಯದಲ್ಲಿ ಹಾಗೂ ವಾದಿ ಈ ದಾವೆಯನ್ನು ಸಲ್ಲಿಸಿದ್ದ ಸಮಯದಲ್ಲಿ ದಾವಾ ಆಸ್ತಿಯಲ್ಲಿ ನ್ಯೂ ಪ್ರೆಸಿಡೆನ್ಸಿ ಶಾಲೆಯನ್ನು ವಾದಿ ನಡೆಸುತ್ತಿದ್ದರು ಎಂದರೆ ಸರಿ. ನನ್ನ ತಕರಾರು ಹಾಗೂ ಮುಖ್ಯ ವಿಚಾರಣೆಯಲ್ಲಿ ವಾದಿ ನಮ್ಮ ಫೋರ್ಜರಿ ಸಹಿ ಮಾಡಿಕೊಂಡು ಕರಾರನ್ನು ಸೃಷ್ಟಿ ಮಾಡಿರುತ್ತಾರೆ ಎಂದು ಹೇಳಿದ್ದು ಆ ಬಗ್ಗೆ ಯಾವುದೇ ಕ್ರಿಮಿನಲ್ ಪ್ರಕರಣವನ್ನು ದಾಖಲಿಸಿಲ್ಲ. ದಾಖಲೆಗಳು ಹಳೆಯದಾಗಿದ್ದು, ಹಾಳಾಗುತ್ತದೆ ಎಂಬ ಉದ್ದೇಶದಿಂದ ವಾದಿ ದಾಖಲೆಗಳನ್ನು ಲ್ಯಾಮಿನೇಷನ್ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ಕ್ರಯದ ಕರಾರಿನ ಅನ್ವಯ ನಾವುಗಳು ನಮ್ಮ ನಮ್ಮ ಪಾಲಿನ ಬಾಕಿ ಕ್ರಯದ ಪ್ರತಿಪಲ ಹಣವನ್ನು ಪಡೆದು ನೊಂದಾಯಿತ ಕ್ರಯಪತ್ರವನ್ನು ಬರೆದುಕೊಡಲು ಬಾಧ್ಯಸ್ಥರಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಜಾವಬ್ದಾರಿಯಿಂದ ತಪ್ಪಿಸಿಕೊಳ್ಳಲು ವಾದಿಯ ಮೇಲೆ ಸುಳ್ಳು ಆಪಾದನೆಯನ್ನು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಕ್ರಯದ ಕರಾರು ಆದ ನಂತರದಿಂದ ಇಲ್ಲಿಯವರೆಗೂ ವಾದಿ ಬಾಕಿ ಪ್ರತಿಫಲದ ಹಣವನ್ನುಕೊಟ್ಟು ಕ್ರಯಪತ್ರ ಬರೆಸಿಕೊಳ್ಳಲು ಸಿದ್ಧವಾಗಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ತೊಂದರೆಯಿಂದ ಹಾಗೂ ಅಸಹಕಾರದಿಂದ ಅವರು ಕ್ರಯಪತ್ರವನ್ನು ಬರೆಸಿಕೊಳ್ಳಲು ಸಾಧ್ಯವಾಗಿಲ್ಲ ಎಂದರೆ ಸರಿಯಲ್ಲ. ವಾದಿಗೆ ಮೋಸ ಮಾಡುವ ದುರುದ್ದೇಶದಿಂದ ಪಾಲು ವಿಭಾಗದ ದಾವೆ, ಎಫ್.ಡಿ.ಪಿ ಹಾಗೂ ನಿರ್ಭಂದಕಾಜ್ಞೆ ದಾವೆಯನ್ನು ಸಲ್ಲಿಸಿದ್ದೆವು ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ .**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿ ಇದೆ.**

**2 ನೇ ಹೆ. ಹಿ. ಶ್ರೇ. ನ್ಯಾ ಮತ್ತು**

**ಜೆ. ಎಂ.ಎಫ್.ಸಿ ನ್ಯಾಯಾಲಯ, ಶಿವಮೊಗ್ಗ.**